ಕರ್ನಾಟಕ ಸರ್ಕಾರ

ಸಂಖ್ಯೆ : ಡಿಟಿಇ 01 ಬಿಎಲ್‌ಡಿ 2014
ಅಡಕ :

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು – 560 001,
ದಿನಾಂಕ: 24-06-2014.

ಇವರಿಗೆ,

**ಪ್ರಿನ್ಸಿಪಾಲರು,**

1. ಸರ್ಕಾರಿ ಪಾಲಿಟೆಕ್ನಿಕ್, ಉಡುಪಿ / ಚನ್ನಪಟ್ಟಣ / ಕಾರವಾರ / ಮುಳಬಾಗಿಲು / ಕುಷ್ಟಗಿ / ಹೊಳೆನರಸೀಪುರ / ಬಾಗಲಕೋಟೆ / ಬೀಳಗಿ / ಗುಲ್ಬರ್ಗಾ / ತುಮಕೂರು / ರಾಯಚೂರು / ಕೆ.ಆರ್.ಪೇಟೆ / ಬಾಗೇಪಲ್ಲಿ / ಬೆಳಗಾಂ / ಚಾಮರಾಜನಗರ / ಜೋಯಿಡಾ / ನಾಗಮಂಗಲ / ಮಿರ್ಲೆ / ತುರುವೇಕೆರೆ / ಕುಶಾಲನಗರ / ಬಿಜಾಪುರ / ಹಾನಗಲ್
2. ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಾರ್ಕಳ / ಗುಲ್ಬರ್ಗಾ / ಶಿವಮೊಗ್ಗ / ರಾಮನಗರ /
3. ಕರ್ನಾಟಕ (ಸರ್ಕಾರಿ) ಪಾಲಿಟೆಕ್ನಿಕ್, ಮಂಗಳೂರು
4. ಸರ್ಕಾರಿ ಗಣಿ ಶಿಕ್ಷಣ ಶಾಲೆ, ಕೆ.ಜಿ.ಎಫ್
5. ಶ್ರೀಮತಿ ಎಲ್.ವಿ. (ಸರ್ಕಾರಿ) ಪಾಲಿಟೆಕ್ನಿಕ್, ಹಾಸನ
6. ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆ, ಹೆಸರುಘಟ್ಟ, ಬೆಂಗಳೂರು
7. ಡಿ.ಆರ್.ಆರ್.(ಸರ್ಕಾರಿ) ಪಾಲಿಟೆಕ್ನಿಕ್, ದಾವಣಗೆರೆ
8. ಸಿ.ಪಿ.ಸಿ(ಸರ್ಕಾರಿ) ಪಾಲಿಟೆಕ್ನಿಕ್, ಮೈಸೂರು
9. ಡಿ.ಎ.ಸಿ.ಜಿ (ಸರ್ಕಾರಿ) ಪಾಲಿಟೆಕ್ನಿಕ್, ಚಿಕ್ಕಮಗಳೂರು

ಮಾನ್ಯರೇ,

ವಿಷಯ: ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇಲ್ಲಿನ 2013-14 ನೇ ಸಾಲಿನ ಮಹಾಲೇಖಪಾಲರ ಲೆಕ್ಕ ತಪಾಸಣೆಯ ಬಗ್ಗೆ

ಉಲ್ಲೇಖ:
1. ಈ ಕಛೇರಿ ಪತ್ರ ಸಂಖ್ಯೆ : ಡಿಟಿಇ 01 ಬಿಎಲ್‌ಡಿ 2014 ದಿನಾಂಕ : 06-05-2014.
2. ಪ್ರಧಾನ ಮಹಾಲೇಖಪಾಲರು ಬೆಂಗಳೂರು ಇವರ ಪತ್ರ ಸಂಖ್ಯೆ: ಪಿಆರ್/ಎಜಿ(ಜಿ ಅಂಡ್ ಎಸ್.ಎಸ್.ಎ) ಓಎಡಿ-1 : ಸಿಎಪಿ-14 : 2014-15/72, ದಿನಾಂಕ:17-06-2014.
3. ಈ ಕಛೇರಿ ಜ್ಞಾಪನ ಪತ್ರ ಸಂಖ್ಯೆ: ತಾಂಶಿನಿ : 4 : ಆರ್‌ಐಪಿ (1) : 2013-14 / 1016 ದಿನಾಂಕ: 23-06-2014

-----------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಈ ಕಛೇರಿ ಪತ್ರದಲ್ಲಿ 2013-14 ನೇ ಸಾಲಿನ ಇಲಾಖೆಯ ಲೆಕ್ಕ ತನಿಖೆಗಾಗಿ ಮಹಾಲೇಖಪಾಲರು ಆಗಮಿಸುತ್ತಿರುವುದರಿಂದ ಲೆಕ್ಕ ಶೀರ್ಷಿಕೆ: 4202-02-104-1-01-139,422,423-ಯೋಜನೆ, 4202-02-104-1-01-436-(ಆರ್.ಐ.ಡಿ.ಎಫ್-17 ನಬಾರ್ಡ್ ಯೋಜನೆ), 4202-02-104-0-05-386-ಯೋಜನೆ(ಕೇಂದ್ರ ಸರ್ಕಾರದ ಎಂ.ಹೆಚ್.ಆರ್.ಡಿ ಅಡಿಯಲ್ಲಿ) ಹಾಗೂ 2203-00-105-0-09-051-ಯೋಜನೆಯಡಿಯಲ್ಲಿ (ಒಂದಾವರ್ತಿ ಹೆಚ್ಚುವರಿ ಕೇಂದ್ರ ಸಹಾಯ ಧನ-One Time ACA) ಯೋಜನೆಯಡಿ ಬಿಡುಗಡೆ ಮಾಡಿರುವ ಅನುದಾನಕ್ಕೆ ಉಪಯುಕ್ತತಾ ಪ್ರಮಾಣ ಪತ್ರ, ಖರ್ಚು-ವೆಚ್ಚ ಮತ್ತು ಭೌತಿಕ ಪ್ರಗತಿಯ ವರದಿಯನ್ನು ಪತ್ರಕ್ಕೆ ಲಗತ್ತಿಸಿದ ನಮೂನೆಯಂತೆ ಕಳುಹಿಸಬೇಕೆಂದು ಕೋರಲಾಗಿತ್ತು. ಆದರೆ ಇದುವರೆವಿಗೂ ತಮ್ಮಿಂದ ಯಾವುದೇ ಮಾಹಿತಿಯು ಬಂದಿರುವುದಿಲ್ಲ.

ಉಲ್ಲೇಖ (3) ರ ಈ ಕಛೇರಿ ಜ್ಞಾಪನ ಪತ್ರದಲ್ಲಿ ಉಲ್ಲೇಖ (2) ರ ಪತ್ರದಂತೆ 2013-14 ನೇ ಸಾಲಿನ ಇಲಾಖೆಯ ಲೆಕ್ಕ ತನಿಖೆಯನ್ನು ಮಹಾಲೇಖಪಾಲರು ದಿನಾಂಕ: 03-07-2014 ರಿಂದ ಕೈಗೊಳ್ಳುತ್ತಿರುವುದರಿಂದ ಕಟ್ಟಡ ವಿಭಾಗಕ್ಕೆ ಸಂಬಂಧಿಸಿದಂತೆ ವಿವಿಧ ಲೆಕ್ಕ ಶೀರ್ಷಿಕೆಗಳಲ್ಲಿ ಬಿಡುಗಡೆ ಮಾಡಿರುವ ಅನುದಾನಕ್ಕೆ ಉಪಯುಕ್ತತಾ ಪ್ರಮಾಣ ಪತ್ರ, ಖರ್ಚು-ವೆಚ್ಚ ಮತ್ತು ಭೌತಿಕ ಪ್ರಗತಿಯ ವರದಿಯನ್ನು ಲೆಕ್ಕ ತಪಾಸಣೆ ವೇಳೆಯಲ್ಲಿ ಒದಗಿಸಬೇಕೆಂದು ಆದೇಶಿಸಲಾಗಿದೆ. ಆದುದರಿಂದ ಕೂಡಲೇ ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆ/ಮೆ.ರೈಟ್ಸ್ ಸಂಸ್ಥೆ/ಕರ್ನಾಟಕ ಗೃಹ ಮಂಡಳಿ/ನಿರ್ಮಿತಿ ಕೇಂದ್ರ ಗಳ ಅಧಿಕಾರಿಗಳನ್ನು ಕೂಡಲೇ ಸಂಪರ್ಕಿಸಿ ಮೇಲೆ ತಿಳಿಸಿರುವಂತೆ ವಿವಿಧ ಲೆಕ್ಕ ಶೀರ್ಷಿಕೆಗಳಲ್ಲಿ ಬಿಡುಗಡೆ ಮಾಡಿರುವ ಅನುದಾನಕ್ಕೆ ಉಪಯುಕ್ತತಾ ಪ್ರಮಾಣ ಪತ್ರ, ಖರ್ಚು-ವೆಚ್ಚ ಮತ್ತು ಭೌತಿಕ ಪ್ರಗತಿಯ ವರದಿಯನ್ನು ದಿನಾಂಕ:30-06-2014ರೊಳಗೆ ಈ ಕಛೇರಿಗೆ ಕಳುಹಿಸಬೇಕೆಂದು ಈ ಮೂಲಕ ತಮ್ಮಲ್ಲಿ ಕೋರಲಾಗಿದೆ. ಅಲ್ಲದೇ ಇದನ್ನು **ಅತ್ಯಂತ ಜರೂರು** ಎಂದು ಪರಿಗಣಿಸಲು ಸಹ ಸೂಚಿಸಲಾಗಿದೆ. ಇ-ಮೇಲ್ ವಿಳಾಸ **saikumar1960@gmail.com**

ತಮ್ಮ ವಿಶ್ವಾಸಿ,

**ಸಹ ನಿರ್ದೇಶಕರು (ಆಡಳಿತ)**
**ಜಂಟಿ ನಿರ್ದೇಶಕರು (ಆಡಳಿತ)**
ತಾಂತ್ರಿಕ [illegible]
ಬೆಂಗಳೂರು-560001.

**ಪ್ರತಿ ಇವರಿಗೆ:**

ಇ-ಆಡಳಿತ ವಿಭಾಗಕ್ಕೆ ಮೇಲ್ಕಂಡ ಮಾಹಿತಿಯನ್ನು ನಿರ್ದೇಶಕರ ವೆಬ್ ಸೈಟ್‌ನಲ್ಲಿ ಅಳವಡಿಸಲು ಸೂಚಿಸಲಾಗಿದೆ.